**IN THE COURT OF I ADDL. CIVIL JUDGE & JMFC**
**AT BELGAUM**

**(PRESENTED OVER BY SRI.PRAVEEN NAYAK)**

**O.S./0001316/2014**

**APPELLANTS :**

1. Shri. Pandurang S/o. Krishnaji Patil
 Maruti Galli, Jaffarwadi, Kadoli, Tal/Dsit Belgaum.

VERSUS

**RESPONDENTS :**

1. Shri. Narayan S/. Basawant Patil
 Main Road, Jaffarwadi Kadoli, Tal/Dist Belgaum.
2. Smt. Sunita W/o. Gajanan Patil
 Kalkhamb Astha Village, Tal/Dist Belgaum.
3. Smt. Kalpana W/o. Ashok Kalkhambkar
 Kalhamb Astha Village, Tal/Dist Belgaum.
4. Shri. Suresh Krishnaji Patil
 Main Road, Jaffarwadi, Kadoli, Tal/Dist Belgaum.
5. Shri. Monappa Krishnaji Patil
 TIT Road, Near Parwati Garden, Kolhapur, Dist Kolhapur, Maharashtra.

---

R.A.Chachadi, Advocate for the appellant.

---

**ಅಸಲು ದಾವಾ ಸಂಖ್ಯೆ: 1316-2014 ಪಿಡಬ್ಲೂ: 1**

**ಪ್ರಮಾಣ ವಚನ ಬೋಧಿಸಿದ ತಾ: 22-02-2016**

**ಪಾಟೀ ಸವಾಲು : ಶ್ರೀ ಎ ಎಂ ಪಿ ವಕೀಲರಿಂದ**

**ನಾನು ಮರಾಠಿ ಮಾದ್ಯಮದಲ್ಲಿ 4ನೇ ತರಗತಿ ವರೆಗೆ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ನಾನು ಸೈನ್ಯದಲ್ಲಿ 1963 ರಲ್ಲಿ ಸೇರಿ 1981 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನನಗೆ ಸೈನ್ಯಕ್ಕೆ ಸೇರಿದಾಗ ನನಗೆ ಮಾಸಿಕ**

55 ರೂ. ವೇತನ ಇತ್ತು. ನನ್ನ ವಿವಾಹ 1971 ರಲ್ಲಿ ಆಗಿತ್ತು. ನನ್ನ ವೇತನದಲ್ಲಿ ಯಾವುದೇ ಉಳಿತಾಯ ಆಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಸುಮಾರು 10 ರೂ ಗಳನ್ನು ಉಳಿಸುತ್ತಿದ್ದೆನು ಎಂದು ನುಡಿಯುತ್ತಾರೆ. ನಿವೃತ್ತಿ ಆದ ನಂತರ ನನ್ನ ಬಳಿ ಸುಮಾರು 30 ಸಾವಿರ ರೂಪಾಯಿ ಹಣ ಇತ್ತು.

ನನಗೆ ಆರು ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರು ಇರುತ್ತಾರೆ. ನಾನು ಸೈನ್ಯದಲ್ಲಿ ಇದ್ದಾಗ ಮಾಸಿಕ 50 ರೂ ಗಳನ್ನು ಮನೆಗೆ ಕಳುಹಿಸುತ್ತಿದ್ದೆನು. ನಮ್ಮ ಸಹೋದರರ ನಡುವೆ ಪಾಲು ವಿಭಜನೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಪಾಲು ವಿಭಜನೆಯಲ್ಲಿ 2-3 ಗುಂಟೆಗಳನ್ನು ನೀಡಿರುತ್ತಾರೆ. ಸದ್ರಿ ಜಮೀನನ್ನು ನೀಡಿ 2 ವರ್ಷ ಆಗಿರುತ್ತದೆ. ಇಲ್ಲಿಯವರೆಗೆ ನಮ್ಮ ಕುಟುಂಬದ ಸ್ವತುತ ವಿಂಗಡನೆ ಆಗಿರುವದಿಲ್ಲ. ನಾನು 4ನೇ ಮತ್ತು 5ನೇ ಪ್ರತಿವಾದಿ ಹಾಗೂ ಬಸವಂತ ಅವರು ಕೂಡಿ ವಾಸವಿದ್ದೆವು ಎಂದರೆ ಸರಿ ಅಲ್ಲ. 4 ಮತ್ತು 5 ನೇ ಪ್ರತಿವಾದಿ ಹಾಗೂ ಬಸವಂತ ಸೇರಿ ಸ್ವತ್ತುಗಳನ್ನು ವಿಭಜನೆ ಮಾಡಿದ್ದರು ಎಂದರೆ ಸರಿ ಅಲ್ಲ. ದಾವಾ ಸ್ವತ್ತು ಆಲತಾಗ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಸದ್ರಿ ಜಮೀನಿನಲ್ಲಿ 1 ಎಕರೆ 8 ಗುಂಟೆ ಜಮೀನನ್ನು 1981 ರಲ್ಲಿ 21000 ರೂಪಾಯಿಗಳಿಗೆ ಖರೀದಿಸಿರುತ್ತೇವೆ ಎಂದರೆ ಸರಿ ಅಲ್ಲ. ವಾದಿ ಮತ್ತು ಪ್ರತಿವಾದಿಗಳೆಲ್ಲ ಸೇರಿ ಹಣ ನೀಡಿ ಸದ್ರಿ ಜಮೀನನ್ನು ಖರೀದಿಸಿರುತ್ತೇವೆ ಎಂದರೆ ಸರಿ ಅಲ್ಲ. ಸದ್ರಿ ಜಮೀನನ್ನು 21000 ರೂ ಗಳಿಗೆ ಖರೀದಿಸಿರುತ್ತೇವೆ ಎಂದರೆ ಸಾಕ್ಷಿಯು ಎಲ್ಲ ಖರ್ಚು ಸೇರಿ 29000 ರೂ ಆಗಿರುತ್ತದೆ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ ಕ್ರಯದ ಮೊಬಲಗು 21000 ರೂ ಎಂದು ನಮೂದ ಆಗಿರುತ್ತದೆ ಎಂದರೆ ಸರಿ. ಸದ್ರಿ ಸ್ವತ್ತನ್ನು ಖರೀದಿಸಿದ ನಂತರ 4ನೇ ಪ್ರತಿವಾದಿ ಊಳುಮೆ ಮಾಡುತ್ತಿದ್ದರು ಎಂದರೆ ಸರಿ ಅಲ್ಲ. ಸದ್ರಿ ಜಮೀನಿನಲ್ಲಿ ಬಾವಿ ಇರುತ್ತದೆ. ಸದ್ರಿ ಬಾವಿಯ ಮೇಲೆ ಕೂಡಿಸಿರುವ ಪಂಪಸೆಟ್ 4 ಮತ್ತು 5 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ ಅಲ್ಲ. ಸದ್ರಿ ಕೃಷಿ ಭೂಮಿಯ ಡೈರಿ ಉತಾರೆ ನಮೂದು ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಎಲ್ಲರೂ ಸೇರಿ ಹಣ ನೀಡಿ ಸದ್ರಿ ಸ್ವತ್ತನ್ನು ಖರೀ ದಿಸಿದ್ದು ಅದನ್ನು ನನ್ನ ಹೆಸರಿನಲ್ಲಿ ಕ್ರಯಪತ್ರ ಮಾಡಿಸಿಕೊಳ್ಳಲಾಯಿತು ಎಂದರೆ ಸರಿ ಅಲ್ಲ. ನಾನು

ನಿವೃತ್ತಿ ಆದ ನಂತರ ನಮ್ಮ ಊರಿನಲ್ಲಿ ವಾಸವಿರುತ್ತೇನೆ. ನಾನು ಹಾಗೂ ನನ್ನ ಹೆಂಡತಿ ಈಗ ಕಂಗ್ರಾಳಿಯಲ್ಲಿ ವಾಸವಿರುತ್ತೇವೆ ಎಂದರೆ ಸರಿ ಅಲ್ಲ.

ನ್ಯಾಯಾಲಯದ ಅವಧಿ ಮುಗಿದಿರುವದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ತೆ. ನ್ಯಾ. ಸಾಕ್ಷಿಯ ಹೇಳಿಕೆಯ ಮೇ ರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

Sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆಎಮ್‌ಎಫ್‌ಸಿ, ಬೆಳಗಾವಿ.